19

545
[illegible]
15/7/19

# ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ: 2019-20ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ಬಗ್ಗೆ

ಓದಲಾಗಿದೆ.
1. ಆಯುಷ್ ಮಂತ್ರಾಲಯದ ಪತ್ರ ಸಂಖ್ಯೆ: F No.Z.16011/04/2018 – EP (IM-1) Part-1, dated: 03.01.2019.
2. ಆಯುಷ್ ಮಂತ್ರಾಲಯದ ತಿದ್ದುಪಡಿ ಸಂಖ್ಯೆ: F No.Z.16011/04/2018 – EP (IM-1) Part-1, dated: 12.02.2019.
3. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ದಿ: 02.07.2019ರಂದು ನಡೆದ ಸಭೆಯ ನಡವಳಿ.

****

ಪ್ರಸ್ತಾವನೆ:-

ಮೇಲೆ ಓದಲಾದ ಕ್ರ.ಸಂ. (1)ರ ಭಾರತ ಸರ್ಕಾರದ ಆಯುಷ್ ಮಂತ್ರಾಲಯದ ಪತ್ರದಲ್ಲಿ, 2019-20ನೇ ಶೈಕ್ಷಣಿಕ ಸಾಲಿಗೆ ಕಡ್ಡಾಯವಾಗಿ ಆಯುಷ್ ಪದವಿ ಕೋರ್ಸ್‌ಗಳಿಗೆ NEET ಅರ್ಹತೆಯ ಆಧಾರದ ಮೇಲೆ ಮತ್ತು ಆಯುಷ್ ಸ್ನಾತಕೋತ್ತರ ಕೋರ್ಸ್‌ಗಳಿಗೆ (AIA-PGET) ಅರ್ಹತೆಯ ಆಧಾರದ ಮೇಲೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಂತೆ ಹಾಗೂ ಆಯುಷ್ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಶೇಕಡಾ 15ರಷ್ಟು ಸೀಟುಗಳನ್ನು ಅಖಿಲ ಭಾರತ ಕೋಟಾ ಸೀಟುಗಳಾಗಿ ನೀಡುವಂತೆ ಹಾಗೂ ಈ ಸೀಟುಗಳಿಗೆ ಕೇಂದ್ರ ಸರ್ಕಾರವು ನೇಮಿಸಿದ ಪ್ರಾಧಿಕಾರವು ಸೀಟುಗಳನ್ನು ಹಂಚಿಕೆ ಮಾಡುವುದಾಗಿ ತಿಳಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ. (2)ರ ಭಾರತ ಸರ್ಕಾರದ ಆಯುಷ್ ಮಂತ್ರಾಲಯದ ತಿದ್ದುಪಡಿಯಲ್ಲಿ ಮಂತ್ರಾಲಯವು ದಿನಾಂಕ: 03.01.2019ರಂದು ಕಳುಹಿಸಿರುವ ಪತ್ರಕ್ಕೆ ತಿದ್ದುಪಡಿ ಮಾಡಿ ಅಖಿಲ ಭಾರತ ಕೋಟಾದಡಿ ಶೇಕಡಾ 15ರಷ್ಟು ಸೀಟುಗಳನ್ನು ನೀಡುವುದರಿಂದ, ಬಿ.ಎನ್.ವೈ.ಎಸ್. ಕೋರ್ಸ್‌ನ್ನು ಕಡೆಗಣಿಸುವಂತೆ ಮತ್ತು ಉಳಿದ ಆಯುಷ್ ಕೋರ್ಸ್‌ಗಳಿಗೆ ಕೇಂದ್ರದ ಕೋಟಾವನ್ನು ನೀಡುವಂತೆ ತಿಳಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ. (3)ರ ನಡವಳಿಯಲ್ಲಿ, 2019-20ನೇ ಶೈಕ್ಷಣಿಕ ಸಾಲಿಗೆ ಆಯುಷ್ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳ ಸೀಟು ಹಂಚಿಕೆ ಮತ್ತು ಶುಲ್ಕ ನಿಗದಿ ಬಗ್ಗೆ ಕರ್ನಾಟಕ ರಾಜ್ಯ ಖಾಸಗಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳ ಫೆಡರೇಷನ್ ಮತ್ತು ಆಡಳಿತ ಮಂಡಳಿಯ ಪ್ರತಿನಿಧಿಗಳೊಂದಿಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ, ನೆರೆಹೊರೆಯ ರಾಜ್ಯಗಳಲ್ಲಿ ಚಾಲ್ತಿಯಲ್ಲಿರುವ ಸೀಟು ಹಂಚಿಕೆ ಹಾಗೂ ಶುಲ್ಕ ನಿಗದಿ ಮತ್ತು 2019-20ನೇ ಶೈಕ್ಷಣಿಕ ಸಾಲಿನಲ್ಲಿ ಹೊಸದಾಗಿ ಶೇಕಡಾ 15ರಷ್ಟು ಭಾರತ ಸರ್ಕಾರದ ಕೋಟಾದಡಿಯ ಸೀಟು ಹಂಚಿಕೆ ಬಗ್ಗೆ ವಿವರವಾಗಿ ಚರ್ಚಿಸಿ, ರಾಜ್ಯದ ಖಾಸಗಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಭಾರತ ಸರ್ಕಾರದ ಕೋಟಾ, ರಾಜ್ಯ ಸರ್ಕಾರದ ಕೋಟಾ ಮತ್ತು ಖಾಸಗಿ ಆಡಳಿತ ಮಂಡಳಿ ಕೋಟಾಗಳ ಸೀಟು ಅನುಪಾತ ಹಾಗೂ ಶುಲ್ಕದ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದೆ.

.......2

18



ಭಾರತ ಸರ್ಕಾರದ ಆಯುಷ್ ಮಂತ್ರಾಲಯದ ನಿರ್ದೇಶನ, ಆಯುಷ್ ಕೋರ್ಸ್‌ಗಳ ಸೀಟು ಹಂಚಿಕೆ ಅನುಪಾತ ಮತ್ತು ಶುಲ್ಕ ನಿಗದಿ ಬಗ್ಗೆ ದಿನಾಂಕ:02.07.2019 ರಂದು ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರೊಂದಿಗೆ ಕರ್ನಾಟಕ ರಾಜ್ಯ ಖಾಸಗಿ ಆಯುಷ್ ಮಹಾವಿದ್ಯಾಲಯಗಳ ಫೆಡರೇಷನ್ ಜೊತೆ ನಡೆದ ಸಭೆಯಲ್ಲಿ ಚರ್ಚಿಸಿರುವ ವಿಷಯಗಳನ್ನು ಕೂಲಂಕಷವಾಗಿ ಪರಿಶೀಲಿಸಿ, 2019-20ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ವಾರ್ಷಿಕ ಶುಲ್ಕವನ್ನು ಪರಿಷ್ಕರಿಸಿ, ನಿಗದಿಪಡಿಸಲು ಹಾಗೂ ಸರ್ಕಾರಿ ಆಯುಷ್ ವೈದ್ಯಕೀಯ ಮಹಾವಿದ್ಯಾಲಗಳಲ್ಲಿನ ಸೀಟು ಹಂಚಿಕೆ ಮತ್ತು ಶುಲ್ಕವನ್ನು ಸಹ ನಿಗದಿಪಡಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರಿ ಆದೇಶ ಸಂಖ್ಯೆ: ಆಕುಕ 63 ಪಿಟಿಡಿ 2019, ಬೆಂಗಳೂರು, ದಿನಾಂಕ:11.07.2019.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2019-20ನೇ ಶೈಕ್ಷಣಿಕ ಸಾಲಿಗೆ ರಾಜ್ಯದ ಸರ್ಕಾರಿ, ಖಾಸಗಿ ಅನುದಾನಿತ ಮತ್ತು ಖಾಸಗಿ ಅನುದಾನರಹಿತ ಆಯುಷ್ ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿನ ಪದವಿ ಮತ್ತು ಸ್ನಾತಕೋತ್ತರ ಕೋರ್ಸ್‌ಗಳಿಗೆ ಸೀಟು ಹಂಚಿಕೆ ಮತ್ತು ವಾರ್ಷಿಕ ಶುಲ್ಕವನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

## ಪದವಿ ಕೋರ್ಸ್‌ಗಳ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕ

### ಅ) ಸರ್ಕಾರಿ ಮಹಾವಿದ್ಯಾಲಯಗಳಲ್ಲಿ

**ಬಿ.ಎ.ಎಂ.ಎಸ್., ಬಿ.ಯು.ಎಂ.ಎಸ್. ಮತ್ತು ಬಿ.ಹೆಚ್.ಎಂ.ಎಸ್. ಕೋರ್ಸ್‌ಗಳಿಗೆ**

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1. | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.25,000/- |
| 2. | ರಾಜ್ಯ ಸರ್ಕಾರದ ಸೀಟುಗಳು | ಶೇ.85 | ರೂ.25,000/- |

**ಬಿ.ಎನ್.ವೈ.ಎಸ್. ಕೋರ್ಸ್‌ಗೆ**

| ಸೀಟು ಹಂಚಿಕೆ ಅನುಪಾತ | ಶುಲ್ಕ (ಗರಿಷ್ಠ ಮೊತ್ತ) |
|---|---|
| ಸರ್ಕಾರಿ ಸೀಟುಗಳು 100% | ರೂ. 25,000/- |

### ಆ) ಖಾಸಗಿ ಅನುದಾನಿತ ಆಯುರ್ವೇದ ಮಹಾವಿದ್ಯಾಲಯಗಳಲ್ಲಿ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1. | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.45,000/- |
| 2. | ರಾಜ್ಯ ಸರ್ಕಾರ ಭರ್ತಿ ಮಾಡುವ ಸರ್ಕಾರಿ ಕೋಟಾ ಸೀಟುಗಳು | ಶೇ.65 | ರೂ.45,000/- |
| 3. | ಆಡಳಿತ ಮಂಡಳಿಗಳು ಭರ್ತಿ ಮಾಡುವ ಸೀಟುಗಳು | ಶೇ.20 | ರೂ.1,83,750/- |

.......3

17



## ಇ) ಖಾಸಗಿ ಅನುದಾನರಹಿತ ಮಹಾವಿದ್ಯಾಲಯಗಳಲ್ಲಿ

### ಬಿ.ಎ.ಎಂ.ಎಸ್., ಬಿ.ಯು.ಎಂ.ಎಸ್. ಮತ್ತು ಬಿ.ಹೆಚ್.ಎಂ.ಎಸ್. ಕೋರ್ಸ್‌ಗಳಿಗೆ

| ಕ್ರಸಂ. | ಸೀಟು ಹಂಚಿಕೆ | ಅನುಪಾತ | ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1. | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.2,00,000/– |
| 2. | ರಾಜ್ಯ ಸರ್ಕಾರ ಭರ್ತಿ ಮಾಡುವ ಸರ್ಕಾರಿ ಕೋಟಾ ಸೀಟುಗಳು | ಶೇ.25 | ರೂ.60,000/– |
| 3. | ಆಡಳಿತ ಮಂಡಳಿಗಳು ಭರ್ತಿ ಮಾಡುವ ಸೀಟುಗಳು | ಶೇ.40 | ರೂ1,83,750/– |
| 4. | NRI /ಆಡಳಿತ ಮಂಡಳಿಯ ಸೀಟುಗಳು. | ಶೇ.20 | ರೂ.7,00,000/– |

### ಬಿ.ಎನ್.ವೈ.ಎಸ್. ಕೋರ್ಸ್‌ಗೆ

| ಕ್ರಸಂ. | ಸೀಟು ಹಂಚಿಕೆ | ಅನುಪಾತ | ಶುಲ್ಕ (ಗರಿಷ್ಠ ಮೊತ್ತ) |
|---|---|---|---|
| 1. | ರಾಜ್ಯ ಸರ್ಕಾರ ಭರ್ತಿ ಮಾಡುವ ಸರ್ಕಾರಿ ಕೋಟಾ ಸೀಟುಗಳು | ಶೇ.20 | ರೂ.60,000/– |
| 2. | ಕೆ.ಇ.ಎ. ಮೂಲಕ ಭರ್ತಿ ಮಾಡುವ ಆಡಳಿತ ಮಂಡಳಿ ಸೀಟುಗಳು | ಶೇ.20 | ರೂ1,83,750/– |
| 3. | ಆಡಳಿತ ಮಂಡಳಿಗಳು ಭರ್ತಿ ಮಾಡುವ ಸೀಟುಗಳು | ಶೇ.40 | ರೂ1,83,750/– |
| 4. | NRI /ಆಡಳಿತ ಮಂಡಳಿಯ ಸೀಟುಗಳು. | ಶೇ.20 | ರೂ.7,00,000/– |

## ಸ್ನಾತಕೋತ್ತರ ಕೋರ್ಸ್‌ಗಳ ಸೀಟು ಹಂಚಿಕೆ ಅನುಪಾತ ಮತ್ತು ವಾರ್ಷಿಕ ಶುಲ್ಕ

### ಅ) ಸರ್ಕಾರಿ ಮಹಾವಿದ್ಯಾಲಯಗಳಲ್ಲಿ

| ಕ್ರಸಂ. | ಸೀಟು ಹಂಚಿಕೆ | ಅನುಪಾತ | ಶುಲ್ಕ ನಿಗದಿ (ಗರಿಷ್ಠ ಮೊತ್ತ) |
|---|---|---|---|
| 1. | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.50,000/– |
| 2. | ರಾಜ್ಯ ಸರ್ಕಾರದ ಸೀಟುಗಳು | ಶೇ.85 | ರೂ.50,000/– |

### ಆ) ಖಾಸಗಿ ಅನುದಾನರಹಿತ ಮಹಾವಿದ್ಯಾಲಯಗಳಲ್ಲಿ

| ಕ್ರಸಂ. | ಸೀಟು ಹಂಚಿಕೆ | ಅನುಪಾತ | ಶುಲ್ಕ ನಿಗದಿ (ಗರಿಷ್ಠ ಮೊತ್ತ) |
|---|---|---|---|
| 1. | ಭಾರತ ಸರ್ಕಾರದ ಸೀಟುಗಳು | ಶೇ.15 | ರೂ.3,67,500/– |
| 2. | ರಾಜ್ಯ ಸರ್ಕಾರದ ಸೀಟುಗಳು | ಶೇ.25 | ರೂ.1,00,000/– |
| 3. | ಆಡಳಿತ ಮಂಡಳಿಗಳು ಭರ್ತಿ ಮಾಡುವ ಸೀಟುಗಳು | ಶೇ.40 | ರೂ3,67,500/– |
| 4. | NRI /ಆಡಳಿತ ಮಂಡಳಿಯ ಸೀಟುಗಳು. | ಶೇ.20 | ರೂ.14,00,000/– |

......4

## ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಕೋರ್ಸ್‌ಗಳಿಗೆ

| ಕ್ರ.ಸಂ. | ಸೀಟು ಹಂಚಿಕೆ | ಅನುಪಾತ | ಶುಲ್ಕ ನಿಗದಿ (ಗರಿಷ್ಠ ಮೊತ್ತ) |
|---|---|---|---|
| 1. | ರಾಜ್ಯ ಸರ್ಕಾರದ ಸೀಟುಗಳು | ಶೇ.25 | ರೂ.1,00,000/- |
| 3. | ಆಡಳಿತ ಮಂಡಳಿಗಳು ಭರ್ತಿ ಮಾಡುವ ಸೀಟುಗಳು | ಶೇ.55 | ರೂ3,67,500/- |
| 4. | NRI /ಆಡಳಿತ ಮಂಡಳಿಯ ಸೀಟುಗಳು. | ಶೇ.20 | ರೂ.14,00,000/- |

ಖಾಸಗಿ ಆಡಳಿತ ಮಂಡಳಿಯವರು ಸರ್ಕಾರ ನಿಗದಿಪಡಿಸಿದ ಗರಿಷ್ಠ ವಾರ್ಷಿಕ ಶುಲ್ಕ ಮೊತ್ತಕ್ಕಿಂತ ಹೆಚ್ಚಿಗೆ ಪಡೆಯುವಂತಿಲ್ಲ.

ಭಾರತ ಸರ್ಕಾರದ ಕೋಟಾ ಸೀಟುಗಳಲ್ಲಿ ಭರ್ತಿಯಾಗದೆ ಉಳಿಕೆಯಾದ ಸೀಟುಗಳನ್ನು ಅದೇ ಶುಲ್ಕದಲ್ಲಿ ರಾಜ್ಯ ಸರ್ಕಾರದಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ನಿಯಮಾನುಸಾರ ಸೀಟು ಹಂಚಿಕೆ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

ಬಿ. ಕಮಲಮ್ಮ
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
ಆಯುಷ್, ಶಿಕ್ಷಣ ನಿಯಂತ್ರಣ ಮತ್ತು ಹಣ್ಣು)

(ಬಿ.ಕಮಲಮ್ಮ)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಭಾವೈಪ & ಸಮನ್ವಯ)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು (ಜಿ.&ಎಸ್.ಎಸ್.ಎ/ಇ&ಆರ್.ಎಸ್.ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ:5398, ಬೆಂಗಳೂರು-560 001.
2. ಪ್ರಧಾನ ಮಹಾಲೇಖಪಾಲರು (ಎ.&ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ:5329, ಬೆಂಗಳೂರು-560 001.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು.
4. ಆಯುಕ್ತರು, ಆಯುಷ್ ಇಲಾಖೆ, ಧನ್ವಂತರಿ ರಸ್ತೆ, ಬೆಂಗಳೂರು-560 009.
5. ಕುಲಸಚಿವರು, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, 4ನೇ 'ಟಿ' ಬ್ಲಾಕ್, ಜಯನಗರ, ಬೆಂಗಳೂರು.
6. ಕಾರ್ಯದರ್ಶಿ, ಕರ್ನಾಟಕ ರಾಜ್ಯ ಖಾಸಗಿ ಆಯುಷ್ ಕಾಲೇಜು ಮತ್ತು ಆಸ್ಪತ್ರೆಗಳ ಅಸೋಸಿಯೇಷನ್ ಫೆಡರೇಷನ್, ಮುಖ್ಯರಸ್ತೆ, ಗಜೇಂದ್ರಗಡ, ಗದಗ ಜಿಲ್ಲೆ.

**ಪ್ರತಿಗಳು:-**

1. ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಆಪ್ತ ಕಾರ್ಯದರ್ಶಿಯವರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಪತ್ರಾಂಕಿತ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
3. ಸರ್ಕಾರದ ಉಪ ಕಾರ್ಯದರ್ಶಿ-3 ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಆಪ್ತ ಸಹಾಯಕರಿಗೆ.
4. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.